# ಸಂಗೀತ ಮತ್ತು ಸುರತಾನಂದ

ಸಂಗೀತಕ್ಕೆ ಮನ ಸೋಲದವರಿಲ್ಲ. ಅಂಥವರಿಲ್ಲವೆಂದು ವಾದ ಮಾಡಲಾಗದೆ ಇರಬಹುದು. ಅವರು ಕಿವುಡರಾಗಿರಬೇಕು ಅಥವಾ ಮಹಾನ್ ಅರಸಿಕರಾಗಿರಬೇಕು. ಸಸ್ಯಗಳೂ ಪ್ರಾಣಿಗಳೂ ಸಂಗೀತಕ್ಕೆ ಸ್ಪಂದಿಸುತ್ತವೆ ಎಂದೂ ಹೇಳಲಾಗುತ್ತಿದೆ. ಸಸ್ಯಗಳ ಬಗ್ಗೆ ಕರಾರುವಾಕ್ಕಾಗಿ ಹೇಳಲು ಸಾಧ್ಯವಾಗದೆ ಇದ್ದರೂ, ದನ, ಕರು, ನಾಯಿಗಳಂಥ ಪ್ರಾಣಿಗಳೂ ಸಂಗೀತಕ್ಕೆ ಮಾರು ಹೋಗಿ ಪ್ರತಿಕ್ರಿಯೆ ವ್ಯಕ್ತಪಡಿಸುವುದನ್ನು ಕಂಡವರು ಇದ್ದಾರೆ. ಅಂದಮೇಲೆ ಸಂಗೀತದ ಮೋಡಿಗೆ ಒಳಗಾಗದ ಮನುಷ್ಯ ಅಪರೂಪವೇ ಸರಿ.

ಬಹುಶಃ ಆದಿಮಾನವ ಮಾತು ಕಲಿಯುವ ಮುನ್ನವೇ ಸಂಗೀತ ಕಲಿತಿದ್ದನೆಂದು ತೋರುತ್ತದೆ. ಪ್ರಕೃತಿಯು ಉಂಟು ಮಾಡುವ ವಿವಿಧ, ವಿಭಿನ್ನ ಸದ್ದುಗಳನ್ನು ರಾಗಗಳನ್ನು ತನ್ನ ದನಿಯ ಮೂಲಕ ಅನುಕರಣೆ ಮಾಡುವುದನ್ನು ಪ್ರಾರಂಭಿಸಿರಬೇಕು. ಗಾಳಿ ಬೀಸುವಾಗ ಉಂಟಾಗುವ ಶ್ರುತಿ ಲಯಗಳ ಏರಿಳಿತಗಳು ಅವನನ್ನು ಬೆರಗುಗೊಳಿಸಿ, ಅವುಗಳ ಮೋಡಿಗೆ ಮನಸೋತು ಅನುಕರಣೆ ಮಾಡುವುದನ್ನು ಅಭ್ಯಾಸ ಮಾಡಿರಬೇಕು. ಮಾನವನ ಸಂಗೀತ ಪ್ರೀತಿಗೆ ಪ್ರಕೃತಿಯೇ ಮೊದಲ ಗುರು; ಅದೇ ಕೈ ಹಿಡಿದು ನಡೆಸಿದ ಮೊದಲ ತಾಯಿ.

ಸಂಗೀತ ವ್ಯಕ್ತಿಯ ಹೃದಯವನ್ನು ಮೃದುಗೊಳಿಸುತ್ತದೆ; ಅವನ ಭಾವಕೋಶವನ್ನು ಉದ್ದೀಪಿಸಿ ಹೆಚ್ಚೆಚ್ಚು ಮಾನವೀಯಗೊಳಿಸುತ್ತದೆ. ಇದರ ಮುಂದುವರಿದ ಭಾಗಗಳೆಂಬಂತೆ ಸಾಹಿತ್ಯ, ಚಿತ್ರಕಲೆ, ಶಿಲ್ಪಕಲೆ ಮುಂತಾದ ಕಲಾ ಪ್ರಕಾರಗಳು ಇದೇ ಬಗೆಯ ಹೃದಯ ಸಂಚಲನವನ್ನು ಮಾಡುತ್ತವೆ. ಸಂಗೀತ ಭಾವ ಪ್ರಪಂಚಕ್ಕೆ ಸೇರಿದ ಅಂಶವಾಗಿರುವುದರಿಂದ ಅನೇಕ ವೇಳೆ ಅದು ಸಂಪ್ರದಾಯದಂಥ ಕಟ್ಟಳೆಗಳನ್ನು, ಬಂಧನಗಳನ್ನು ಮೀರುತ್ತದೆ; ಹೊಸ ಸಾಧ್ಯತೆಗಳತ್ತ ಚಲಿಸತೊಡಗುತ್ತದೆ. (ಆದರೆ, ಕಾಲ ಕಳೆದಂತೆಲ್ಲಾ ಸಂಗೀತ ಸಂಪ್ರದಾಯವಾದಿಗಳ ಹಿಡಿತಕ್ಕೆ ಸಿಲುಕಿ ಶಾಸ್ತ್ರೀಯವಾಗಿಬಿಡುವ ಮತ್ತು ಉಸಿರುಗಟ್ಟಿಸಿಕೊಂಡು ನರಳಾಟಕೆಯಾಗುವ ಸ್ಥಿತಿಗೆ ಬಂದುಬಿಡುವುದು ದುರಂತವೇ ಸರಿ.) ಜತೆಗೆ ಭಾವಜಗತ್ತಿನ ಈ ಸಂಗೀತದ ಭಾವ ವಿಭಾವ ವ್ಯಭಿಚಾರಿ ಭಾವಗಳು ತಮ್ಮ ಸಂಘರ್ಷದ ಕಾರಣದಿಂದಾಗಿಯೇ ಅನೇಕ ಸೃಷ್ಟಿಗಳಿಗೆ ಕಾರಣವಾಗುತ್ತವೆ. ವಿಚಾರ, ವಿವೇಚನೆಗಳಾಚೆ ಎದೆಯ ದನಿಯೇ ಪ್ರಧಾನವಾಗಿರುವುದರಿಂದ ಹೃದಯ ಸಂಸ್ಕಾರ ವಿಕಾಸಗೊಳ್ಳುತ್ತದೆ.

ಸಂಗೀತವು ಸಾಹಿತ್ಯದ ಪೂರಕ ಶಕ್ತಿಯಾಗಿ, ಸಹವರ್ತಿಯಾಗಿ ಕೆಲಸ ಮಾಡಲಾರಂಭಿಸಿದ್ದು ಬಹುಶಃ ನಾಗರಿಕತೆ ಬೆಳೆದ ನಂತರವೇ ಇರಬೇಕು. ಸಂಗೀತ ಕೇವಲ ರಾಗಾಲಾಪನೆಯ ಸಾಧನ ಮಾತ್ರವಲ್ಲ, ಅದರ ಉದ್ದೇಶ ವ್ಯಾಪಕವಾಗಿದೆಯೆಂದು ತಿಳಿದಿರುವುದರಿಂದ ಈ ರೀತಿಯಾಗಿದೆ. ಆದರೆ ಸಂಗೀತ ರಾಗ ಪ್ರಧಾನವೂ ನಾದ ಪ್ರಧಾನವೂ ಆದ್ದರಿಂದ ಅದನ್ನು ಓಂಕಾರ ನಾದಕ್ಕೆ ಸಮವಾಗಿ ಕಾಣಲಾಗಿದೆ. ಅದು ವ್ಯಕ್ತಿಯ ನಾಭೀಮೂಲದಿಂದ ಉದ್ಭವಗೊಂಡು ಗಂಟಲಲ್ಲಿ ವಿವಿಧ ಮಜಲಿನ ಏರಿಳಿತ ನಾದದಲ್ಲಿ ವಿಹರಿಸಿ ಬಾಯಿ ಮೂಲಕ ಹೊರಹೊಮ್ಮುತ್ತದೆ. ಈ ಅಭಿವ್ಯಕ್ತಿಯಲ್ಲಿ ಹಲ್ಲು, ನಾಲಿಗೆ, ತುಟಿ, ಕವಟೆಗಳು ಸಹಕರಿಸುತ್ತವೆ.

ಹಿಂದೂಸ್ಥಾನೀ ಸಂಗೀತದಲ್ಲಿ ಮುಳುಗೇಳುವ ಸಹೃದಯರು ಮತ್ತು ಗಾಯಕರು ನಾಭೀ ಮೂಲದಿಂದ ಹೊರಹೊಮ್ಮಿ ವಿವಿಧ ಸ್ವರಗಳಲ್ಲಿ, ಏರಿಳಿತಗಳಲ್ಲಿ ಆಲಾಪನೆ ಮಾಡುವುದನ್ನೂ, ಅದನ್ನು ಅನುಭವಿಸುವುದನ್ನು ಆ ಅನುಭಾವದ ಸಂಧಿ ಕ್ಷಣದಲ್ಲಿ ಉಂಟಾಗುವ ಆನಂದವನ್ನು ಸುರತಾನಂದಕ್ಕೆ ಸಮವೆಂದು ಕರೆಯುತ್ತಾರೆ. ಸ್ತ್ರೀ ಪುರುಷ ಸಂಭೋಗ ಸಮಯದಲ್ಲಿ ಕೇವಲ ಆನಂದವಿರುತ್ತದೆ. ಆ ಆನಂದ 'ಮೈಮನಗಳ' ಅಂತರವನ್ನು ಸಂಪೂರ್ಣವಾಗಿಸಿ ಏಕವಾಗಿಸುವ ಎರಡು ವಿಭಿನ್ನ ಲಿಂಗಗಳನ್ನು ಸಮಲಿಂಗಗೊಳಿಸುವ ಶಕ್ತಿಯನ್ನು ಪಡೆಯುತ್ತದೆ. ಸಂಗೀತಕ್ಕೆ ಈ ಗುಣವಿರುತ್ತದೆ ಎಂದು ಆ ಕ್ಷೇತ್ರದ ಅನುಭವಸ್ಥರು ಹೇಳುತ್ತಾರೆ. ಗಾಯಕ ಮತ್ತು ಕೇಳುಗರ ನಡುವಿನ ದೈಹಿಕ ಅಂತರವನ್ನು ಇಲ್ಲವಾಗಿಸಿ, ಸಂಗೀತ ಹೊರ ಹೊಮ್ಮುವ ಒಂದು ನೆಲೆ, ಸಂಗೀತವನ್ನು ಆಸ್ವಾದಿಸುವ ಮತ್ತೊಂದು ದೈಹಿಕ ನೆಲೆ– ಎರಡೂ ಒಂದು ನೆಲೆಯಲ್ಲಿ ಮಿಲನಗೊಂಡು ಆನಂದರೂಪ ತಾಳುತ್ತವೆ. ಆಗ ಗಾಯಕ ಬೇರೆ ಅಲ್ಲ, ಕೇಳುಗ ಬೇರೆಯಲ್ಲ. ಇಲ್ಲಿ ಯಾರು ಹೆಣ್ಣು ಯಾರು ಗಂಡು ಎಂದು ವಿಭಜಿಸಿ ನೋಡುವ ಅವಶ್ಯಕತೆಯಿಲ್ಲ. ಸುರತಾನಂದದಲ್ಲಿ ಇದೇ ನೆಲೆ ಪ್ರಾಪ್ತವಾಗುತ್ತದೆ; ಲಿಂಗ ವೈದೃಶ್ಯ ಅಳಿಯುತ್ತದೆ. ಇಂಥ ಅನುಭವ ಸ್ಥಿತಿಯಲ್ಲಿ ಲಿಂಗ, ಕಾಲ, ಕೃತಕ ವರ್ಣ–ವರ್ಗಗಳ ಅಂತರ ನಾಶವಾಗಿ 'ಸಮಾನತೆ' ಸೃಷ್ಟಿಯಾಗುತ್ತದೆ,

ಈ ಆನಂದದ ತುದಿಯನ್ನು ಎಲ್ಲರಿಂದ ಮುಟ್ಟಲು ಸಾಧ್ಯವಿಲ್ಲ. ಅದಕ್ಕೆ ಸಾಧನೆ ಬೇಕು; ಮನೋಸ್ಥಿತಿ ಎತ್ತರಕ್ಕೇರಬೇಕು! ಅಥವಾ ಇದೊಂದು ಭ್ರಾಮಕ ಸ್ಥಿತಿಯೋ?

■ ಶಿಕಾಕು

# ಮಾತೇ ಮುತ್ತು

★ ಮಹಿಳೆಗೆ ಸಮಾನ ಸ್ಥಾನ ನೀಡಿದರೆ, ಅವಳು ಖಂಡಿತಾ ಸಮಾನತೆ ಸಾಧಿಸುವುದರಲ್ಲಿ ಹಿಂದೆ ಬೀಳುವುದಿಲ್ಲ.

–ಸಾಕ್ರೆಟಿಸ್

★ ಮಹಿಳೆಯರೇ, ನಿಮ್ಮ ಅನುಮತಿ ಇಲ್ಲದೇ ನೀವು ಕೀಳೆಂಬ ಭಾವನೆಯನ್ನು ಯಾರೂ ಮೂಡಿಸಲಾಗದು.

–ಎಲಿಯನಾರ್ ರೂಸ್‌ವೆಲ್ಟ್

★ ಜಾತಿವಾದಿಗಳು ಹಾಗೂ ಮಹಿಳೆಯನ್ನು ಕೀಳು ದೃಷ್ಟಿಯಿಂದ ನೋಡುವವರು ಮಾತ್ರ ಮಹಿಳಾ ಮಸೂದೆಗೆ ಅಡ್ಡಿಪಡಿಸುತ್ತಾರೆ. ಇವರೆಲ್ಲಾ ಪ್ರಗತಿಯ ಚಕ್ರವನ್ನು ಹಿಂದಕ್ಕೆಳೆಯುವ ಪಾಳೇಗಾರಿ ಪ್ರಭುಗಳು.

–ಬೃಂದಾ ಕಾರಟ್

★ ಸ್ವತಂತ್ರ ವಾತಾವರಣದಲ್ಲಿ ಚರ್ಚೆ ನಡೆದಾಗ ಸರಿಯಾದ ತೀರ್ಮಾನಕ್ಕೆ ಬರಲು ಇರುವಷ್ಟು ಅವಕಾಶ ಬೇರಾವ ವಾತಾವರಣದಲ್ಲೂ ಇಲ್ಲ.

–ಲಾರ್ಡ್ ಮೆಕಾಲೆ

★ ಸ್ವಾರ್ಥ ಮೊದಲು ಇತರರನ್ನು ಸುಡುತ್ತದೆ; ಅನಂತರ ನಮ್ಮನ್ನೇ ಸುಡುತ್ತದೆ.

–ರಷ್ಯಾ ಗಾದೆ

★ ಯಾರು ಕೇಳಲಿ ಎಂದು ನಾನು ಹಾಡುವುದಿಲ್ಲ, ಹಾಡುವುದು ಅನಿವಾರ್ಯ ಕರ್ಮ ನನಗೆ; ಕೇಳುವವರಿಹರೆಂದು ನಾ ಬಲ್ಲೆ...

–ಜಿ.ಎಸ್.ಶಿವರುದ್ರಪ್ಪ

★ ಸಾವೇ ನಮ್ಮ ಜೀವನದ ಕೊನೆ. ಅದಕ್ಕೂ ಮೊದಲು ಯಾವುದಾದರೂ ಘನಕಾರ್ಯ ಮಾಡೋಣ.

–ಲಾರ್ಡ್ ಟೆನಿಸನ್

★ ಗ್ರಂಥಕಾರನು ಸಮಸ್ತ ಪ್ರಜೆಗಾಗಿ ದುಡಿಯುತ್ತಾನೆ; ಸಮಸ್ತ ಪ್ರಜೆಯೂ ಅವನಿಗೆ ಜೀವನ ಕೊಡಬೇಕು.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಹಿತವನ್ನು ಮಾಡತಕ್ಕದ್ದೇ ಸಾಹಿತ್ಯ.

–ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿ

★ ತಿಂದು ಹಾಳಾಗುವ ಸಾಹಿತ್ಯವಿದೆ. ತಿಂದರೂ ತೀರದ ಸಾಹಿತ್ಯವಿದೆ. ಎಲ್ಲ ಸಾಹಿತ್ಯವೂ ಬೇಕು. ಇಂಥ ಸಾಹಿತ್ಯ ಬೇಕು, ಅಂಥ ಸಾಹಿತ್ಯ ಬೇಡ–ಎಂದು ಹೇಳುವುದು ವಿಮರ್ಶೆಯ ವಿವೇಕವಲ್ಲದೆ, ಕೃತಿಗೆ ಆಜ್ಞೆಯಲ್ಲ.

–ದ.ರಾ.ಬೇಂದ್ರೆ

★ದುಃಖವನ್ನು ತನ್ನಮಟ್ಟಿಗೆ ಇಟ್ಟುಕೊಳ್ಳಬೇಕು, ಸುಖವನ್ನು ಮಾತ್ರ ಹಂಚಬೇಕು.

–ವಿ.ವಾ.ಶಿರವಾಡಕರ

★ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ, ದುಃಖವನ್ನು ಸಹಿಸುವ ಶಕ್ತಿ ನೂರು ಮಂದಿಗಿರುತ್ತದೆ.

–ಥಾಮಸ್ ಕಾರ್ಲೈಲ್

★ಸುಳ್ಳುಗಳನ್ನು ಕೇಳಿಸಿಕೊಳ್ಳುತ್ತ ಬದುಕುವುದು ಸಾಮಾನ್ಯವಾಗಿ ಎಲ್ಲರಿಗೂ ಕ್ಷೇಮವೆನ್ನಿಸುತ್ತದೆ, ಹಿತವೆನ್ನಿಸುತ್ತದೆ. ಆದರೂ ಜನರ ಆತ್ಮ ಸತ್ಯಕ್ಕಾಗಿ ಹಸಿದಿರುತ್ತದೆ.

–ಯು.ಆರ್.ಅನಂತಮೂರ್ತಿ